# ತುಂಡುಡುಗೆಯ ಪ್ರಶ್ನೆ

ಮಾನವ ಚರಿತ್ರೆಯ ಉಗಮದಲ್ಲಿ ಅವನು ನಗ್ನನಾಗಿಯೇ ಇದ್ದ. ಉಡುಪು ಎಂಬುದು ಎಷ್ಟೋ ವರ್ಷಗಳ ನಂತರ ಅವನ ದೇಹವನ್ನು ಅಲಂಕರಿಸಿತು. ಅದು ಅವನ ಸೌಂದರ್ಯವರ್ಧಕ ಸಾಧನವಾಗಿ ಅಲ್ಲ ಎಂಬುದನ್ನು ನಾವು ಮರೆಯಬಾರದು. ಅವನ ದೇಹವನ್ನು ಬಿಸಿಲು, ಚಳಿ, ಮಳೆ ಗಾಳಿಗಳಂಥ ಪ್ರಕೃತಿ ವಿಕೋಪಗಳಿಂದ ರಕ್ಷಿಸುವ ಸಾಧನವಾಗಿ ಬಂತು ಅಷ್ಟೆ. ಅವನನ್ನು ಈ ಪ್ರಕೃತಿ ವಿಕೋಪಗಳಿಂದ ಕಾಪಾಡುತ್ತಿದ್ದ ಮರದ ಪೊಟರೆ, ಗುಹೆಗಳಂತೆ ಉಡುಪು ಕೂಡ ಒಂದು ಅಂಗವೆಂದೇ ನಾವು ತಿಳಿಯಬೇಕು. ಅನಂತರ ದೇಹ ರಕ್ಷಣೆಗೆಂದು ಬಳಸುತ್ತಿದ್ದ ಎಲೆ, ತೊಗಟೆ, ಚರ್ಮ, ಹೂ ಮತ್ತು ಬಟ್ಟೆಗಳನ್ನು ದೇಹದ ಸೌಂದರ್ಯ ವರ್ಧಕಗಳನ್ನಾಗಿ ಹೇಗೆ ಬಳಸಿಕೊಳ್ಳಬೇಕೆಂದು ಮನುಷ್ಯನ ಮಿದುಳು ಚಿಂತಿಸಿದ ಫಲವಾಗಿ ಉಡುಪಿನಲ್ಲಿ ವೈವಿಧ್ಯತೆ ರೂಪುಗೊಂಡಿತು. ಆ ಉಡುಪನ್ನು ದೇಹದ ಯಾವ ಭಾಗ ಮುಚ್ಚಬೇಕು? ಯಾವ ಭಾಗವನ್ನು ತೆರೆದು ತೋರಿಸಬೇಕು? ಯಾವ ಭಾಗದಲ್ಲಿ ಬಟ್ಟೆ ಎಷ್ಟೆಷ್ಟಿರಬೇಕೆಂಬ ಔಚಿತ್ಯ ಮತ್ತು ವಿವೇಕಗಳು ಕೆಲಸ ಮಾಡತೊಡಗಿದವು.

ಈ ಹಂತದಲ್ಲಿ ವಸ್ತ್ರವಿನ್ಯಾಸವೆಂಬ ಕಲೆ ಉಗಮವಾಗಿರಬೇಕು. ಈ ವಸ್ತ್ರವಿನ್ಯಾಸವು ದೇಶದಿಂದ ದೇಶಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗಿ ಅರಳಿ ಈ ಉಡುಪು ಈ ಸಂಸ್ಕೃತಿ ಧರ್ಮಗಳ ಚಿಹ್ನೆಗಳೆಂಬ ಅರ್ಥ ಪಡೆದುಕೊಂಡು– ಈ ಉಡುಪು ಈ ಸಂಸ್ಕೃತಿಯ ಸ್ವತ್ತು ಎಂಬಂತೆ ಮಾತನಾಡುವ ಗುತ್ತೇಗಾರಿಕೆ ಪ್ರಾರಂಭವಾಯಿತು. ಈ ಗುತ್ತೇಗಾರಿಕೆಯ ಅಹಂಕಾರ ಅನ್ಯ ಜನಾಂಗ– ಧರ್ಮೀಯರ ಉಡುಪುಗಳನ್ನು ಹೀಗಳೆಯುವ ಮನಸ್ಥಿತಿಗೆ ಕಾರಣವಾಯಿತು. ಹಾಗಾದರೆ ತುಂಡುಡುಗೆ ಯಾವ ಸಂಸ್ಕೃತಿಯದು? ಯಾವ ದೇಶದ್ದು? ಯಾವ ಜಾತಿ– ಜನಾಂಗದ್ದು? ಭಾರತೀಯ ನೆಲದಲ್ಲಿ ಅದಕ್ಕೆ ಬೇರುಗಳೇ ಇಲ್ಲವೆ? ಭಾರತೀಯರೆಲ್ಲ ಎಲ್ಲ ಕಾಲಘಟ್ಟದಲ್ಲು ಮೈತುಂಬ ಬಟ್ಟೆಯನ್ನೇ ಧರಿಸುತ್ತಿದ್ದರೆ? ಇಂದು ಸಹ ಭಾರತದ ವೈವಿಧ್ಯಮಯ ಭೂ ಪ್ರದೇಶದಲ್ಲಿ ವಾಸ ಮಾಡುವ ನಿವಾಸಿಗಳೆಲ್ಲರೂ ಧರಿಸುವ ಬಟ್ಟೆಯಲ್ಲಿ ಒಂದೇ ಬಗೆ ಇದೆಯೆ? ಅದರಲ್ಲಿ ಮೈ ತೋರಿಸುವ ವಿನ್ಯಾಸಗಳಿಲ್ಲವೆ?

ತುಂಡುಡುಗೆಯ ಬಗ್ಗೆ ಮಡಿವಂತರ ವಿರೋಧವೇಕೆ? ಅದು ಅಂಗಾಂಗ ಪ್ರದರ್ಶನಕ್ಕೆ ಅವಕಾಶ ನೀಡುತ್ತದೆ ಎಂಬ ಕಾರಣಕ್ಕಾಗಿ ಅಲ್ಲವೇ? ಅಂದರೆ ಈ ತುಂಡುಡುಗೆಯ ಹಿಂದೆ ಪೂರ್ವಕಲ್ಪಿತ ಶೀಲ– ಅಶ್ಲೀಲತೆಯ ಪ್ರಶ್ನೆ ಇದೆ ಎಂದಾಯಿತು. ನಮ್ಮ ಪೂರ್ವ ನಿರ್ಧರಿತ ಪರಿಕಲ್ಪನೆಗಳು ಶೀಲ–ಅಶ್ಲೀಲಗಳನ್ನು ನಿರ್ಧರಿಸುತ್ತವೆ. ಈ ಕಲಿತ ಮಡಿವಂತರಿಗೆ ಅಶ್ಲೀಲ ಉಡುಪು ಎನಿಸುವುದು ಭಾರತದ ಆದಿವಾಸಿಗಳಿಗೆ ಅನ್ನಿಸದಿರುವಂಥದು. ಇಂದಿಗೂ ಭಾರತದ ಬಹುಪಾಲು ಆದಿವಾಸಿಗಳು ಅರೆಬರೆ ಧಿರಿಸು ಧರಿಸುತ್ತಾರೆ. ಆ ಧಿರಿಸು ಅವರು ಬದುಕುವ ಹವಾಮಾನ– ಅವಶ್ಯಕತೆಗಳು ಮತ್ತು ಅವರು ರೂಢಿಸಿಕೊಂಡು ಬಂದ ಸಂಪ್ರದಾಯ ಆಚರಣೆಗಳ ಹಿನ್ನಲೆಯಿಂದ ಬೆಳೆದು ಬಂದಿರುವಂಥದು. ಅದು ಕೂಡ ಮತ್ತೆಲ್ಲೋ ನೋಡಿದ, ಕೇಳಿದ ಮತ್ತು ಹೇಳಿದ ಪ್ರಭಾವಗಳಿಂದ ತಪ್ಪಿಸಿಕೊಂಡಿರುವುದಿಲ್ಲ ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕು. ಇಂದಿನ ಆಧುನಿಕ ಯುಗದ ಜಗತ್ತು ತನ್ನ ಜ್ಞಾನ–ತಂತ್ರಜ್ಞಾನ ಆವಿಷ್ಕಾರಗಳಿಂದ ಪರಸ್ಪರ ಪ್ರಭಾವ ಅನುಕರಣೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಆದುದರಿಂದ ಜಗತ್ತಿನಲ್ಲೆಲ್ಲಾ ಹೆಚ್ಚು ಕಡಿಮೆ ಕಲಿತವರಲ್ಲಿ ಒಂದೇ ಬಗೆಯ ಉಡುಪು ಗೋಚರಿಸುತ್ತಿದೆ. ಇದು ನನ್ನದು– ನನ್ನ ಸಂಸ್ಕೃತಿಯದು ಎಂದು ಹೇಳಿಕೊಳ್ಳುವವರು ಕೂಡ ಹಬ್ಬ ಹರಿದಿನಗಳಲ್ಲಿ ಮಾತ್ರ ಧರಿಸುವಂಥ ಅನಿವಾರ್ಯತೆ ಸೃಷ್ಟಿಯಾಗಿದೆ. ಅಂದ ಮೇಲೆ ಇದು ನನ್ನದು, ನನ್ನ ಸಂಸ್ಕೃತಿಯ ಮುದ್ರೆಯೊತ್ತಿರುವಂಥದು ಎಂದು ಹೇಳುವುದೇ ಹಾಸ್ಯಾಸ್ಪದ ಸಂಗತಿಯಾಗುತ್ತದೆ.

ಸೀರೆ ಪಂಚೆ ಕಚ್ಚೆಗಳು ಭಾರತೀಯ ವಿಶಿಷ್ಟ ಉಡುಪುಗಳೆಂದು ಭಾವಿಸುವುದೇ ತಪ್ಪೆಂದು ತೋರುತ್ತದೆ. ಇವು ಮೂಲತಃ ಭಾರತೀಯ ಜನ್ಯವಲ್ಲ. ಯುರೋಪಿನಿಂದ ಕ್ರಿಸ್ತ ಪೂರ್ವದಲ್ಲಿ ಭಾರತಕ್ಕೆ ಬಂದಿರಬಹುದೆಂದು ಮಾನವ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅಲ್ಲಿಂದ ಬಂದ ಅವು ಇಲ್ಲಿನ ಹವಾಮಾನಕ್ಕೆ ತಕ್ಕಂತೆ ವಿನ್ಯಾಸಗೊಂಡಿವೆ. ನಮ್ಮ ಸೀರೆ, ರವಿಕೆಗಳು ಜಗತ್ತಿನ ಅತಿ ಹೆಚ್ಚು ಸೌಂದರ್ಯ ಪ್ರದರ್ಶನ ಸಾಧನಗಳೆಂದು ಬಲ್ಲವರು ಹೇಳುತ್ತಾರೆ. ಅವು ಸ್ತ್ರೀಯ ದೇಹದ ಅಂಗಾಗಳನ್ನು ಅತ್ಯಂತ ಮಾಧಕವಾಗಿ ಹೊರ ತೋರುತ್ತವೆ. ಹಾಗೂ ಕೆಲವು ಭಾಗಗಳನ್ನು ನಗ್ನವಾಗಿ ಪ್ರದರ್ಶಿಸುತ್ತವೆ. ಈ ಮಾತು ಸುಳ್ಳಲ್ಲವೆಂದು ಅನುಭವಸ್ಥರು ತಿಳಿಸಿದ್ದಾರೆ. ಜಗತ್ತಿನ ಬೇರೆ ಭಾಗದ ಸ್ತ್ರೀಯರು ಹಾಗೆ ನೋಡಿದರೆ ಮೈ ತುಂಬ ಧಿರಿಸು ಧರಿಸುತ್ತಾರೆ. ಪ್ಯಾಷನ್ ಷೋಗಳಲ್ಲಿ ಕ್ಯಾಟ್‌ವಾಕ್ ಮಾಡುವ ಅಥವಾ ಸಿನೆಮಾಗಳಲ್ಲಿ ಮೈ ಪ್ರದರ್ಶನ ಮಾಡುವ ಕೆಲವು ಅಂಶಗಳನ್ನು ಗಮನಿಸಿ ವಿದೇಶಿಯರೆಲ್ಲರೂ ಹಾಗೇ ಇರುತ್ತಾರೆಂದು ಭಾವಿಸುವುದು ತಪ್ಪು ನಿರ್ಧಾರವಾಗುತ್ತದೆ.

ತುಂಡುಡುಗೆಯನ್ನು ಸ್ತ್ರೀಯರು ಧರಿಸಿದರೆ ಮಾತ್ರ ಅಶ್ಲೀಲವೆ? ಪುರುಷರು ತುಂಡುಡುಗೆಯ ಧರಿಸಿದರೆ ಅದು ಅಶ್ಲೀಲವಲ್ಲವೆ? ಈ ಲಿಂಗ ತಾರತಮ್ಯ ಧೋರಣೆ ಏಕೆ? ಈ ಪ್ರಶ್ನೆಯನ್ನು ಸಂಪ್ರದಾಯವಾದಿಗಳು ತಮಗೆ ತಾವೆ ಹಾಕಿಕೊಳ್ಳುವುದು ಒಳ್ಳೆಯದು.

■ **ಶಿಕಾಕು**

## ಮಾತೇ ಮುತ್ತು

★ ಎಡವಿದವನು ಒಬ್ಬೊಬ್ಬನೂ ವಧ್ಯನೆಂಬುದೇ ನಿಶ್ಚಯವಾಗಿಬಿಟ್ಟರೆ ಲೋಕದಲ್ಲಿ ಇಬ್ಬರು ಅಥವಾ ಮೂರು ಜನ ಉಳಿದಾರು! ಮನುಷ್ಯರೆಲ್ಲಾ ಎಷ್ಟಾದರೂ ಹೆಚ್ಚು ದೋಷಗಳುಳ್ಳವರೇ!

–ಮಹಾಭಾರತ

★ ಎಲ್ಲರಿಗೂ ಸ್ವಲ್ಪ ಕಾಲ ಮೋಸ ಮಾಡಬಹುದು; ಕೆಲವರಿಗೆ ಸದಾ ಮೋಸ ಮಾಡಬಹುದು; ಆದರೆ ಎಲ್ಲರನ್ನೂ ಎಲ್ಲ ಕಾಲವೂ ಮೋಸಪಡಿಸಲು ಸಾಧ್ಯವಿಲ್ಲ.

–ಅಬ್ರಾಹಂ ಲಿಂಕನ್

★ ಮಗನಿಗಿಂತಲೂ ಮಗಳು ನೂರು ಪಾಲು ಮೇಲು.

–ಲೋಕೋಕ್ತಿ

★ ಎಲ್ಲರ ಆಸೆಗಳನ್ನೂ ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ, ಎಲ್ಲರ ದುರಾಸೆಗಳನ್ನಲ್ಲ.

–ಮಹಾತ್ಮ ಗಾಂಧೀಜಿ

★ ದೇಶದ ಎಲ್ಲ ಹೆಣ್ಣುಮಕ್ಕಳಿಗೂ ಇನ್ನೂ ಶಿಕ್ಷಣ ದೊರೆತಿಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕರ್ನಾಟಕಕ್ಕೆ ಒಬ್ಬರೂ ಮಹಿಳಾ ಮುಖ್ಯಮಂತ್ರಿಗಳಾಗಲಿಲ್ಲ. ಸುದೀರ್ಘ ಅವಧಿಗೆ ನಮ್ಮಂತಹವರು ರಾಜಕೀಯದಲ್ಲಿ ಇದ್ದು ಸಾಧಿಸಿದ್ದಾದರೂ ಏನು?

–ಬಿ.ಡಿ.ಜತ್ತಿ

★ ಹಿಂದೆ ಹೆಜ್ಜೆ ಇಡದಿದ್ದರೆ ಒಂದು ರೀತಿಯಲ್ಲಿ ಮುಂದೆ ಹೋದಂತೆಯೇ.

–ಅಲೆಕ್ಸಾಂಡರ್ ಪೋಪ್

★ ಒಂದೊಂದು ಹನಿಯಾಗಿಯೇ ಬಿದ್ದರೂ ಕಾಲಾಂತರದಲ್ಲಿ ಕೊಡವು ನೀರಿನಿಂದ ತುಂಬುವುದು. ಅದೇ ರೀತಿ ವಿದ್ಯೆ ಮತ್ತು ಹಣವೂ ಸಹ ಹನಿ ಹನಿಯಂತೆ ಸ್ವಲ್ಪ ಸ್ವಲ್ಪವಾಗಿಯೇ ಸಂಗ್ರಹವಾಗುವುದು.

–ಚಾಣಕ್ಯ ನೀತಿ

★ ಕೀರ್ತಿ ವಿಸ್ತರಿಸುತ್ತಾ ಹೋಗುವ ಅಲೆಯಂತೆ. ಒಮ್ಮೆಲೇ ಇಲ್ಲವಾಗಿ ಬಿಡಬಹುದು!

–ಶೇಕ್ಸ್‌ಪಿಯರ್

★ ಸೋಮಾರಿಯು ಕೈಗೆ ಬಂದದ್ದನ್ನೂ (ಪಡೆದದ್ದನ್ನೂ) ಕಾಪಾಡಿಕೊಳ್ಳಲಾರ.

–ಅನುಭವಾಮೃತ

★ ನಾವು ಅಜ್ಞ ಜನರಿಗೆ ಅವರ ಧರ್ಮದಲ್ಲಿರುವ ಸತ್ಯಾಂಶಗಳನ್ನು ತಿಳಿಸಿಕೊಟ್ಟ ಮೇಲೆಯೂ ಅವರು ಸ್ವಧರ್ಮದಲ್ಲಿ ಶಾಂತಿಯನ್ನು ಕಾಣದೆ ಕ್ರೈಸ್ತ ಧರ್ಮವನ್ನು ಸ್ವೀಕರಿಸುವುದಕ್ಕೆ ಬದ್ಧರಾದರೆ ಮಾತ್ರ ಅದು ನಿಜವಾದ ಧರ್ಮಾಂತರ, ಇಲ್ಲವಾದರೆ ಸ್ಥಳಾಂತರವಷ್ಟೇ.

–ರೆವರೆಂಡ್ ಉತ್ತಂಗಿ ಚೆನ್ನಪ್ಪ

★ ಮಲ್ಲಿಗೆಯ ಪರಿಮಳವನ್ನು ಬಲ್ಲ ದುಂಬಿಯು ದರ್ಭೆಯನ್ನು ಮೋಹಿಸುವುದಿಲ್ಲ.

–ಭಾಮಿನಿ ವಿಲಾಸ